ಆ) ಮತ್ತು ಇ) ಆಯಾ ಜಿಲ್ಲೆಗಳಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ಲಭ್ಯತೆಯನ್ನಾಧರಿಸಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಜಿಲ್ಲೆಗೊಂದು ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕೆಂಬುವುದು ಸರ್ಕಾರದ ಉದ್ದೇಶವಾಗಿದೆ.

ಅದರಂತೆ ತುಮಕೂರು ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಭಾರತೀಯ ವೈದ್ಯಕೀಯ ಪರಿಷತ್ತು ಕೋರಿರುವ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು, ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ಆಯವ್ಯಯ ಲಭ್ಯತೆಯ ಅನುಸಾರವಾಗಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.

864(360); ಡಾ॥ ರಫೀಕ್ ಅಹ್ಮದ್ ಎಸ್ (ತುಮಕೂರು ನಗರ)

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಮಂಜೂರಾದ ಹಣವೆಷ್ಟು;

ಆ) ವಿದ್ಯಾರ್ಥಿನಿಲಯದ ಕಟ್ಟಡಗಳ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ;

ಇ) ಹಾಸ್ಟೆಲ್ ಒಟ್ಟು ಪ್ರದೇಶ ಮಿತಿ ಮತ್ತು ದಾಖಿಲಾತಿ ವಿವರಗಳನ್ನು ಒದಗಿಸುವುದು;

ಈ) ವಿದ್ಯಾರ್ಥಿಯರ ನಿಲಯಕ್ಕೆ ಹೆಚ್ಚಿನ ಸೌಲಭ್ಯಕ್ಕಾಗಿ ನೀಡಲಾದ ಹಣವೆಷ್ಟು; ಕಾದಿರಿಸಲಾದ ಹಣವೆಷ್ಟು; (ವಿವರ ಒದಗಿಸುವುದು)?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) 2013–14ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ₹ 10,732.00 ಲಕ್ಷಗಳನ್ನು ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ ₹ 3,000.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

ಆ) ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ 403 ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳ ಪೈಕಿ 183 ವಿದ್ಯಾರ್ಥಿ ನಿಲಯಗಳ ಕಟ್ಟಡ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ಸೂಕ್ತ ನಿವೇಶನ ಲಭ್ಯವಿರುವ 49 ವಿದ್ಯಾರ್ಥಿ ನಿಲಯಗಳಿಗೆ 2013–14ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕ್ರಮಕ್ಕೈಗೊಳ್ಳಲಾಗುತ್ತಿದೆ.

ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಪಂಗಡದ 75 ವಿದ್ಯಾರ್ಥಿ ನಿಲಯಗಳ ಪೈಕಿ 38 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಕ್ರಮಕೈಗೊಳ್ಳಲಾಗಿದ್ದು, ಸದರಿ 38 ಕಟ್ಟಡ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

ಇ) 2013–14ನೇ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ ಕೆಳಕಂಡಂತಿದೆ;

ಕ್ರಸಂ	ವಿದ್ಯಾರ್ಥಿನಿಲಯಗಳ ವಿವರ	ಸಮಾಜ ಕಲ್ಯಾಣ ಇಲಾಖೆ		ಪರಿಶಿಷ್ಟ ಪಂಗಡಗಳ ನಿರ್ದೇಶನಾಲಯ	
		ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ	ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ	ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ	ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	90,171	68,560	7,662	6,440
2	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು	54,807	46,272	4,279	4,179
	ಒಟ್ಟು	**1,44,978**	**1,14,832**	**11,941**	**10,619**

ಈ) ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ಹೆಚ್ಚಿನ ಸೌಲಭ್ಯಕ್ಕಾಗಿ ಒದಗಿಸಲು 2013–14ನೇ ಸಾಲಿನಲ್ಲಿ ₹ 1816.05 ಲಕ್ಷಗಳ ಅನುದಾನ ಲಭ್ಯಗೊಳಿಸಲಾಗಿದೆ.

ಐ.ಟಿ.ಬಿ.ಟಿ. ಕಂಪನಿಗಳು

865(911); ಶ್ರೀ ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನದ ಕಂಪನಿಗಳು ಎಲ್ಲಿವೆ; ಯಾವ ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿವೆ;

ಆ) ಕಂಪನಿಗಳ ವ್ಯವಹಾರ ಹಾಗೂ ರಫ್ತು ವಾರ್ಷಿಕವಾಗಿ ಎಷ್ಟಿದೆ? (ಮೂರು ವರ್ಷದ ವಾರ್ಷಿಕವಾರು ವಿವರ ನೀಡುವುದು);

ಇ) ಬೆಂಗಳೂರು ಹೊರತುಪಡಿಸಿ ಸಮೀಪದ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ ಭಾಗಗಳಿಗೂ ಐ.ಟಿ,ಬಿ.ಟಿ ಕಂಪನಿಗಳ ವಿಸ್ತರಣೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ; ಯಾವಾಗ ಪ್ರಾರಂಭ ಮಾಡಲಾಗುವುದು;

ಈ) ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ವಿದೇಶಿ ವಿನಿಮಯದಲ್ಲಿ ರಾಜ್ಯದ ಪಾಲು ಎಷ್ಟಿದೆ, ರಫ್ತು ಪ್ರಮಾಣ ಹೆಚ್ಚಳಕ್ಕೆ ಯಾವ ಮಾದರಿಯ ಕ್ರಮ ಕೈಗೊಳ್ಳಲಾಗಿದೆ;

ಉ) ಸರ್ಕಾರಿ ವೆಚ್ಚದಲ್ಲಿ ಉದ್ದಿಮೆದಾರರನ್ನು ವಿದೇಶಕ್ಕೆ ಕಳುಹಿಸಿ ರಾಜ್ಯದಲ್ಲಿ ಕಂಪನಿಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಊ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯ (ಐ.ಟಿ.ಐ.ಆರ್) ಸ್ಥಾಪಿಸಲು ಕೇಂದ್ರ ಸರ್ಕಾರದ ಅನುಮತಿ ದೊರೆತಿದೆಯೇ; ಹಾಗಾದರೆ ಎಲ್ಲಿ ಸ್ಥಾಪಿಸಲಾಗುವುದು?